

ಆಕೆಯು ಉದುರಿದ ಒಣಗಿದ ಎಲೆಗಳನ್ನು, ಕೂಡಿಸಿ, ಅವುಗಳನ್ನು ಒಂದರ ಮೇಲೊಂದು ಇಟ್ಟು ತೆಳ್ಳಗಿನ ದಾರದಲ್ಲಿ ಅಷ್ಟೇ ಸೂಕ್ಷ್ಮವಾಗಿ, ಸಾವಕಾಶವಾಗಿ ಕಟ್ಟಿ ಇಡುತ್ತಿದ್ದಳು. ಅವು ಬಹುಬೆಲೆಯ ನೋಟುಗಳನ್ನು ಕಟ್ಟಿದಂತಾಗಿರುತ್ತಿತ್ತು. ಅದು ಸಂಪತ್ತಿನಂತೆ ಕಾಣುತ್ತಿತ್ತು. ಉದುರಿದ ಎಲೆಗಳು ಉಜ್ವಲ ಲಾಂಛನವಾಗುವಷ್ಟು ಸುಂದರವಾಗಿರುತ್ತವೆ. ಅವುಗಳ ಮೈಮಾಟ, ನಿಲುವಾದ ಎತ್ತರ, ದುಂಡಾಗಿ ಹಬ್ಬಿದ ಶರೀರ, ತುದಿಯಲ್ಲಿ ಚೂಪಾಗಿ ವಿಶಿಷ್ಟ ಜೀವ ಪಡೆದ ರೀತಿ ಎಂಥವರನ್ನೂ ಮೋಹಗೊಳಿಸುತ್ತವೆ. ಇವೇನು ಎಲೆಗಳೋ, ಕಿರೀಟಗಳೋ ಎನ್ನುವಷ್ಟು ಭವ್ಯವಾಗಿ, ಸುಂದರವಾಗಿ ಕಾಣುತ್ತವೆ.